ಫೀಸು. ಹತ್ತು ಮತ್ತು ಇಪ್ಪತ್ತು ಸಾವಿರಕ್ಕೆ ಬಿಲ್ ಇಲ್ಲ. ಏನು ತಿಳಿಸಿ.' ಅಂದ.

ಪ್ರಣತಿ ದಿಟ್ಟವಾಗಿ ಒಮ್ಮೆಗೇ 'ಬೇಡ ಹಾಗಿದ್ದರೆ' ಅಂದಳು. ಖಾಲಿಕೊಡ ಅವಳ ಭುಜವನ್ನು ಮೆದುವಾಗಿ ಒತ್ತಿ ಕಣ್ಣಲ್ಲೇ ಸಂತೈಸಿ ಹಣ ಕಟ್ಟಿಸಿ ನಲ್ವತ್ತು ಸಾವಿರಕ್ಕಷ್ಟೇ ಬಿಲ್ ತೆಗೆದುಕೊಂಡ.

6

'ಸಾರ್ ಮೂವತ್ತು ಸಾವಿರಕ್ಕೆ ಬಿಲ್ಲೇ ಕೊಡಲಿಲ್ಲ ಸಾರ್' ಎಂದು ಖಾಲಿಕೊಡ ವರದರಾಜಪ್ಪನವರ ಬಳಿ ದೂರಿದಾಗ 'ಏ ಅದೆಲ್ಲ ಕಾಮನ್ ಬಿಡ್ರಿ' ಎಂದು ಕೂಲಾಗಿ 'ಕ್ಲಾಸುಗಳು ಶುರುವಾಗ್ತಾವೆ. ಆಮೇಲೆ ಒಂದು ಎಕ್ಸಾಂ ಇರುತ್ತೆ. ಅದು ಪಾಸ್ ಮಾಡ್ಕೊಂಡು ಪರ್ಮನೆಂಟ್ ರಿಜಿಸ್ಟ್ರೇಷನ್ ನಂಬರ್ ಪಡಕೊಳ್ಳಿ' ಅಂದರು. ಇದನ್ನು ಖಾಲಿಕೊಡ ಪ್ರಣತಿಗೆ ಹೇಳಲು ಹೋಗಲಿಲ್ಲ. ಅವನಿಗೆ ಹೆದರಿಕೆ ಆಗಿತ್ತು.



ನೀರಿಗೆ ಇಳಿದದ್ದು ಆಗಿದೆ; ಕೈಕಾಲು ಬಡಿಯದೆ ವಿಧಿಯಿಲ್ಲ ಎನ್ನುವುದನ್ನು ಕಂಡುಕೊಂಡಿದ್ದ ಖಾಲಿಕೊಡ ಅಟೆಂಡೆನ್ಸ್ ಕಂಪಲ್ಸರಿ ಎನ್ನುವ ಕಾರಣಕ್ಕೆ ಹೋಗಿ ಸೆಂಟರ್‌ನಲ್ಲಿ ಕೂರುವ ಮನಸ್ಸು ಮಾಡಿದ. ಪ್ರಣತಿಯನ್ನೂ ಜೊತೆ ಮಾಡಿಕೊಂಡ. 'ವರ್ಷದಲ್ಲಿ ಐದೇ ಓಡಿ ಕೊಡೋದು... ಪಾಲಿಸಿ ಇರೋದೇ ಹಾಗೆ' ಎಂದು ರೊಳ್ಳೆ ತೆಗೆದರು ಕಾಲೇಜಿನವರು. ಐದೇ ಕೊಟ್ಟರೆ ಪಿಎಚ್.ಡಿ ನಿಮ್ಮಪ್ಪ ಮಾಡ್ತಾನಾ ಎಂದು ಕೇಳಬೇಕೆನಿಸಿದ್ದರೂ ಸುಮ್ಮನಾಗಿದ್ದ. ಪ್ರಣತಿ ತನಗಾಗಿ ಜೊತೆಗೂಡಿರುವುದು... ಇದೆಲ್ಲವೂ ಅವಳ ಸಾಹಿತ್ಯಕ ಓದು ಮತ್ತು ತತ್ವಕ್ಕೆ ವಿರುದ್ಧ ಎಂದು ತಿಳಿದಿತ್ತು. ಅವಳು ಮಾತಲ್ಲಿ ಏನೂ ಪ್ರಕಟಗೊಳಿಸುತ್ತಿರಲಿಲ್ಲ. ಮುಖ ಧುಮುಗುಡುತ್ತಿತ್ತು ಅಷ್ಟೇ. ಅದರಲ್ಲೇ ಖಾಲಿಕೊಡಕ್ಕೆ ಎಲ್ಲ ಅರ್ಥವಾಗುತ್ತಿತ್ತು.

ಸಂಶೋಧನೆ ಅಂದರೆ ಚೂರೂ ಪ್ರಿಪರೇಷನ್ ಬೇಡವೇ ಅಂತಂದು ಪ್ರಣತಿ ತನ್ನ ಕಾದಂಬರಿ ಓದಿನ ಆಚೆಗೆ ಸಂಶೋಧನಾ ಗ್ರಂಥಗಳನ್ನು ಓದಿ ರೆಡಿಯಾಗಿ ಕ್ಲಾಸಿಗೆ ಬಂದಿದ್ದಳು. ಕ್ಲಾಸುಗಳಿಗೆ ಕಿವಿಯಾಗುತ್ತ ಅವಳ ಮನಸ್ಸು ನಿರಸನವಾಗಲು ಆರಂಭಿಸಿತ್ತು. ತಾನೇ ಹೆಚ್ಚಿಗೆ ಓದಿಕೊಂಡಿದ್ದೇನೆ ಅಂದುಕೊಳ್ಳುವುದು ಕೊಂಚ ಅಹಂ ಅನಿಸಿದರೂ ಅದು ಸುಳ್ಳಲ್ಲ ಅನಿಸಿತ್ತು. ಮತ್ತು ಹಾಗೇ ಸುಮ್ಮನೆ ತಮ್ಮ ಬ್ಯಾಚ್‌ನವರ ಜೊತೆ ಒಂದೆರಡು ದಿನ ಒಡನಾಡಿದಾಗ ಸಂಶೋಧನೆ ಎನ್ನುವುದು ಪ್ರಮೋಷನ್ ಮತ್ತು ಮಗದೊಂದರ ಸಲುವಾಗಿ ರೂಪುತಳೆದುಬಿಟ್ಟದೆ ಎಂದು ತಿಳಿದುಹೋಯಿತು. ಖಾಲಿಕೊಡದ ಮುಖ ನೋಡಿದರೆ ಮರುಕ ಹುಟ್ಟುತ್ತಿತ್ತು. ಉಳಿದವರ ಮಾತುಗಳಿಗೆ ಕಿವಿಯಾದರೆ ಸಿಟ್ಟು ಬರುತ್ತಿತ್ತು.

ಪ್ರಣತಿಯನ್ನ ಮನಸ್ಸಿನಲ್ಲಿ ಮಾತಾಡಿಕೊಳ್ಳಲು ಬಿಟ್ಟರೆ ಅದು ಘೋರ ಅನಿಸಿ ಖಾಲಿಕೊಡ ಒಮ್ಮೆ ಸುಮ್ಮನಿರಲಾರದೆ 'ಹೇಗಿವೆ ಕ್ಲಾಸುಗಳು ನಿನ್ನ ಪ್ರಕಾರ?' ಎಂದ. ಪ್ರಣತಿ, 'ವಾಂತಿ ಬರ್ತಿದೆ ಒಂದು ನಿಮಿಷ ಬಂದೆ' ಎಂದು ಎದ್ದುಹೋದಳು. ಖಾಲಿಕೊಡದ ಒಳಗೆ ಆ ಹೊತ್ತು ಡಿಆರ್‌ಎನ್ ಹೊಕ್ಕು ವಾಂತಿ ಎಂಬುದು ರೂಪಕ ಹೇಗೆ ಎಂದು ವಿವರಿಸಿದ್ದರು.

7

ಖಾಲಿಕೊಡ ಪ್ರಣತಿ ಎದುರು ದಿನೇದಿನೇ ಕುಗ್ಗತೊಡಗಿತ್ತು. ತಾನು ಅವಳನ್ನು ಒತ್ತಾಯಿಸಬಾರದಿತ್ತು ಅನಿಸಿದ್ದರೂ ಭವಿಷ್ಯ ಕಣ್ಣಮುಂದೆ ಸುಳಿದು ನಗುತ್ತಿತ್ತು. ಆ ನಗು ಸಹಿಸಿಕೊಳ್ಳಲಿಕ್ಕೆ ಸಾಧ್ಯವಾಗದೆ ತೀರಾ ಹತಾಶನಾದಾಗ 'ಐದು ಸಾವಿರಕ್ಕೆ ಇಷ್ಟೆಲ್ಲ ಮಾಡಬೇಕೆ?' ಎಂದು ಕೇಳಿಕೊಳ್ಳುವ ಹಪಹಪಿ.

ಮತ್ತೊಂದು ಕಡೆ ತನಗೂ ಇದಕ್ಕೂ ಸಂಬಂಧವಿಲ್ಲ ಎನ್ನುವಂತೆ ಕದಲುತ್ತಿದ್ದ ಪ್ರಣತಿಯಲ್ಲಿ ಹಲವು ಪ್ರಶ್ನೆಗಳು ಏಳಲು ಆರಂಭಿಸಿದವು. ಅದರಲ್ಲಿ ಮೊದಲನೆಯದು- ಯಾರು ಇವರಿಗೆಲ್ಲ ಪಿಎಚ್.ಡಿ ಕೊಟ್ಟವರು? ಎಂದು ಕೇಳಿಕೊಳ್ಳುವಾಗ ತಾನು ಕಂಡ ಹಿಂದಿನ ಪ್ರೊಫೆಸರ್‌ಗಳ ಮುಖಗಳು ಎದುರು ಬಂದು ತಮ್ಮನ್ನೂ ಎಲ್ಲರ ಒಟ್ಟಿಗೆ ಸೇರಿಸೊ ಅಗತ್ಯವಿಲ್ಲ ಎನ್ನುವಂತೆ ಆಗುತ್ತಿತ್ತು.

ತಮಾಷೆಯ ಸಂಗತಿ ಎಂದರೆ ಇಬ್ಬರಿಗೂ ಒಬ್ಬರೇ ಗೈಡ್ ನಿಗದಿ ಆಗಿರಲಿಲ್ಲ. ಬೇರೆಬೇರೆ. ಖಾಲಿಕೊಡ